

ಅವನೇನೂ ವರ್ಣದ ಮನುಷ್ಯನಾಗಿರಲಿಲ್ಲ, ಅವನೊಬ್ಬ ಮಾನವನಾಗಿದ್ದ. ಕೊನೆಯ ಭಾಷಣಕಾರ ಹಾಗೆಂದು ಹೇಳಿದ್ದ. ಕೆಲವು ನಿರ್ದಿಷ್ಟ ವರ್ಗದವರನ್ನು ಹಿಂದಕ್ಕೆ ತಳ್ಳಿ ಕಾನೂನನ್ನು ಉಲ್ಲಂಘಿಸಿದವರ ಚಿತ್ರಗಳನ್ನು ಪತ್ರಿಕೆಗಳಲ್ಲಿ ನೋಡಿದ್ದನ್ನು ನೆನಪಿಸಿಕೊಂಡ. ಅಂತಹವರು ನಗುಮುಖದಿಂದಲೇ ಜೈಲಿಗೆ ಹೋಗುತ್ತಿದ್ದರು. ಇದು ನಿಜಕ್ಕೂ ವಿಚಿತ್ರ ಜಗತ್ತು ಎಂದು ಅವನಿಗೆ ತೋರಿತು.

ಆ ಭಾಷಣಕಾರ ಮುಂದುವರೆಸಿದ, ಮತ್ತೆ ಕಾರ್ಲಿ ಅದನ್ನು ಆಸಕ್ತಿಯಿಂದ ಕೇಳುತ್ತಿದ್ದ. ಅವನು ಮೆಲುಧ್ವನಿಯಲ್ಲಿ ಮಾತನಾಡುತ್ತಿದ್ದ, ವಾಸ್ತವವಾಗಿ ಎಚ್ಚರಿಕೆಯಿಂದ ಸಿದ್ಧಪಡಿಸಿಕೊಂಡಂತೆ ಅವನ ಭಾಷಣ ಕಂಡುಬರುತ್ತಿತ್ತು. ಈ ಮನುಷ್ಯ ಬಹಳ ದೊಡ್ಡವ್ಯಕ್ತಿ, ಎಂದು ಕಾರ್ಲಿ ಆಲೋಚಿಸಿದ...

ಸಭೆ ಹೆಚ್ಚು ಕಡಿಮೆ ಮುಗಿಯುತ್ತಿದ್ದಂತೆ, ಕಾರ್ಲಿ ಗುಂಪಿನ ಮಧ್ಯೆ ನುಸುಳಿಕೊಂಡು ಹೋಗಲು ಯತ್ನಿಸಿದ. ಭಾಷಣ ಮಾಡಿದವರ ಮಾತುಗಳು ಅವನ ತಲೆಯಲ್ಲಿ ಕೊರೆಯುತ್ತಿದ್ದವು. ಆದರೆ, ಅದು ಅವರು ಹೇಳಿದ್ದು, ತನ್ನ ಊರಿನಲ್ಲಿ ಕಾರ್ಯಗತವಾಗುವುದಿಲ್ಲ ಅಥವಾ ಆಗಬಹುದೇ? ಆ ಗುಂಗಿನಲ್ಲಿ